ವಿಚಾರ ಮಂಥನ




# ಈಗ ಕ್ರೇಜಿವಾಲ್ ಕೈಗೆ ಪೊರಕೆ

ನಮ್ಮ ಸಾಮಾನ್ಯ ಜನತೆ ಭೋಳೆಯಾಗಿದ್ದರೂ ಅದು ಕತ್ತೆಯೇನಲ್ಲ. ಸಾಮಾನ್ಯ ವ್ಯಕ್ತಿಯ ವಿವೇಕಶಕ್ತಿ ಜಾಗೃತವಾಗಿರುತ್ತದೆ. ಹಾಲಿಗೆ ಹಾಲು ನೀರಿಗೆ ನೀರು ಮಾಡುವ ಆಂತರಿಕ ಕ್ಷಮತೆ ಅವನಲ್ಲಿದೆ. ಒಂದು ವೇಳೆ ನೀವು ಅವನನ್ನು ವಂಚಿಸಬಹುದು, ಆದರೆ ಅವನನ್ನು ಶಾಶ್ವತವಾಗಿ ಮೋಸಗೊಳಿಸಲು ಸಾಧ್ಯವಿಲ್ಲ.



ರಮೇಶ ಪತಂಗೆ
ಖ್ಯಾತ ವಿಶ್ಲೇಷಕ

ದಿಲ್ಲಿಯ ಮತದಾರರು 'ಆಪ್'ಗೆ ಝಾಡು ನೀಡಿದರು, ಬಿಜೆಪಿಗೆ ಅಧಿಕಾರದ ಲಾಡು ನೀಡಿದರು. ಕೇಜ್ರೀವಾಲರನ್ನು ಮತದಾರರು ಚಿಂದಿ ಉಡಾಯಿಸಿದರು. ಇದು ಅಪೇಕ್ಷಿತವೇ ಆಗಿತ್ತು. ಒಂದು ಜಾತಕ ಕಥೆಯಿದೆ- ಒಂದು ಸಿಂಹವಿತ್ತು, ನರಿಯೊಂದಿಗೆ ಅದರ ಮೈತ್ರಿಯುಂಟಾಯಿತು. ಸಿಂಹವು ಬೇಟೆಯಾಡಲು ಎತ್ತರ ಜಾಗದಲ್ಲಿ ಅಡಗಿರುತ್ತಿತ್ತು. ಪ್ರಾಣಿ ಸಮೀಪಿಸಿತೆಂದರೆ ನರಿ ಹೇಳುತ್ತಿತ್ತು,''ಮಹಾರಾಜ್ ನಿಮ್ಮ ಪರಾಕ್ರಮ ತೋರಿಸಿ.'' ಪ್ರಾಣಿ ಜಾಗಕ್ಕೆ ಬಂದಾಗ ಸಿಂಹವು ಎಗರಿ ಪ್ರಾಣಿಯನ್ನು ಬೇಟೆಯಾಡುತ್ತಿತ್ತು. ಅನೇಕ ದಿನ ಈ ಉಪಕ್ರಮ ನಡೆದ ಬಳಿಕ ನರಿಗೆ ಅನಿಸುತ್ತದೆ, ಇದರಲ್ಲೇನು ಮಹಾ ಇದೆ ? ನಾನೂ ಸಹ ಬೇಟೆಯಾಡಬಲ್ಲೆ. ಹಾಗೆಂದೇ ಒಂದು ದಿವಸ ಸಿಂಹಕ್ಕೆ ಹೇಳುತ್ತದೆ, ''ಮಹಾರಾಜ್ ಈಗ ನಾನು ಬೇಟೆಯಾಡುವೆ. ಪ್ರಾಣಿ ಹತ್ತಿರ ಬಂತೆಂದರೆ ನೀವು ಹೇಳಿ, ನರಿಯಣ್ಣಾ ನಿನ್ನ ಪರಾಕ್ರಮ ತೋರಿಸು.'' ಆ ದಿನ ಆನೆ ಬಂದಿತು. ಸಿಂಹ ನರಿಗೆ ಹೇಳಿತು, ''ನೀನು ಆನೆಯನ್ನು ಬೇಟೆಯಾಡಲಾರೆ, ನಾನು ಮಾಡುವೆ.'' ನರಿ ಹೇಳಿತು, ''ಇಲ್ಲ ಮಹಾರಾಜ್ ನಾನೇ ಮಾಡುವೆ. ನೀವು ಇಷ್ಟೇ ಹೇಳಿ-ನಿನ್ನ ಪರಾಕ್ರಮ ತೋರಿಸು.'' ಸಿಂಹ ಅದಕ್ಕೆ ಹೇಳುತ್ತದೆ,''ನರಿಯಣ್ಣಾ ನಿನ್ನ ಪರಾಕ್ರಮ ತೋರಿಸು.'' ನರಿ ತ್ವೇಷದಿಂದ ಎಗರುತ್ತದೆ, ಆದರೆ ಅದು ನರಿಯ ಎಗರಾಟ, ಅದು ಆನೆಯೆದುರು ಬೀಳುತ್ತದೆ. ಆನೆಯು ಶಾಂತವಾಗಿ ನರಿ ಕಡೆ ತನ್ನ ಕಾಲನ್ನು ಎತ್ತುತ್ತದೆ, ಅದರ ಮೇಲೆ ಒತ್ತಿಡುತ್ತದೆ. ನರಿ ಅಪ್ಪಚ್ಚಿಯಾಗುತ್ತದೆ. ಇಂದು ಅರವಿಂದ ಕೇಜ್ರೀವಾಲರಿಗೆ ಆದಂತೆಯೇ ಇದು. ಮತದಾರರು ತಮ್ಮ ಆನೆಕಾಲನ್ನೆತ್ತಿ ಕೇಜ್ರೀವಾಲರ ಮೇಲಿಟ್ಟಿದ್ದಾರೆ, ಮುಂದೇನಾಯಿತೆಂದು ನಮಗೆಲ್ಲ ಗೊತ್ತಿದೆ.

ಅರವಿಂದ ಕೇಜ್ರೀವಾಲರ ಪರಾಭವದ ಬಗ್ಗೆ ಸಂತಸ ಪಡಲು ಅಥವಾ ದುಃಖಿಸಲು ಕಾರಣವೇನಿಲ್ಲ. ಅಣ್ಣಾ ಹಜಾರೆಯವರ ಆಂದೋಲನದಲ್ಲಿ ತೂರಿಕೊಂಡು, ಅವರ ಭೋಳೇತನದ ಲಾಭ ಪಡೆದು ಕೇಜ್ರೀವಾಲರು ಅಣ್ಣಾರ ಕರಿಷ್ಮಾ ಸೂರೆಗೈಯಲು ಯತ್ನಿಸಿದರು. ದಿಲ್ಲಿ ವಿಧಾನಸಭಾ ಚುನಾವಣೆಯಲ್ಲಿ ಅದರಿಂದ ಲಾಭವಾಯಿತು. ಕೇಜ್ರೀವಾಲರ ಪಕ್ಷಕ್ಕೆ 70ರಲ್ಲಿ 67 ಸ್ಥಾನಗಳು ಲಭಿಸಿದವು. ಯಾರೇ ತಲೆದೂಗುವಂತಹ ವಿಜಯವಾಗಿತ್ತು ಅದು. ಕೇಜ್ರೀವಾಲರಂತೂ ಉಬ್ಬಿಹೋದರು. ಅಣ್ಣಾರ ಆಂದೋಲನದಿಂದ ಅರಳಿದ ಅರವಿಂದ ! ಒಂದು ಪಿಂಪ್ ವಿಸ್ಕಿ ಕುಡಿದು ಏರದಷ್ಟು ಅಧಿಕಾರದ ಅಮಲು ಏರಿತು. ತಾನೇ ಪ್ರತಿಮೋದಿಯೆಂಬ ಭಾವನೆ ಬೆಳೆಸಿಕೊಂಡರು. ಎರಡು ವರ್ಷಗಳಲ್ಲಿ ನಿತ್ಯವೂ ಎಂಬಂತೆ ಮೋದಿ ವಿರುದ್ಧ ಬಾಯಿಚಪಲ ತೀರಿಸಿಕೊಳ್ಳುವ ಅವಕಾಶವನ್ನು ಅವರು ಬಿಡಲಿಲ್ಲ. ಅವಕಾಶ ಸಿಗದಿದ್ದರೆ ಬೀದಿ ನಾಯಿ ಸುಮ್ಮನೆ ಬೊಗಳುವಂತೆ ಮೋದಿ ವಿರುದ್ಧ ಬೊಗಳುತ್ತಿದ್ದರು. ದಿಲ್ಲಿಯ ಜನತೆ ನನಗೆ ದಿಲ್ಲಿಯ ವ್ಯವಹಾರ ನೋಡಿಕೊಳ್ಳಲು ಚುನಾಯಿಸಿದ್ದಾರೆ ಮೋದಿ ಬಗ್ಗೆ ಬೊಗಳುವುದಕ್ಕಾಗಲ್ಲ, ಎಂಬ ವಿಚಾರ ಅವರಿಗೆ ಹೊಳೆಯಲೇ ಇಲ್ಲ. ಅಧಿಕಾರದ ಅಮಲು ಇಳಿಯಲೊಲ್ಲದು.

ನಮ್ಮ ಸಾಮಾನ್ಯ ಜನತೆ ಭೋಳೆಯಾಗಿದ್ದರೂ ಅದು ಕತ್ತೆಯೇನಲ್ಲ. ಸಾಮಾನ್ಯ ವ್ಯಕ್ತಿಯ ವಿವೇಕಶಕ್ತಿ ಜಾಗೃತವಾಗಿರುತ್ತದೆ. ಹಾಲಿಗೆ ಹಾಲು ನೀರಿಗೆ ನೀರು ಮಾಡುವ ಆಂತರಿಕ ಕ್ಷಮತೆ ಅವನಲ್ಲಿದೆ. ಒಂದು ವೇಳೆ ನೀವು ಅವನನ್ನು ವಂಚಿಸಬಹುದು, ಆದರೆ ಅವನನ್ನು ಶಾಶ್ವತವಾಗಿ ಮೋಸಗೊಳಿಸಲು ಸಾಧ್ಯವಿಲ್ಲ. ಸಾಮಾನ್ಯ ವ್ಯಕ್ತಿ ಹೇಗೆ ಯೋಚಿಸುತ್ತಾನೆಂದು ತಿಳಿಯಬೇಕಿದ್ದರೆ ರಿಕ್ಷಾದವ, ತರಕಾರಿಯವ, ಹಾಲಿನವ, ಕೂಲಿಯವ